ಇಂದು ದಿನಾಂಕಃ ***12-12-2022*** ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನಬೋದಿಸಲಾಯಿತು.

ಪಾಟೀ ಸವಾಲುಃ ಮೇಲ್ಮನವಿದಾರರ ಪರ ಶ್ರೀ ಎಚ್. ಎಂ. ಎಸ್. ವಕೀಲರಿಂದಃ

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಇಂಗ್ಲೀಷ್ ಓದಲು ಬರೆಯಲು ಅಷ್ಟೊಂದು ಬರುವುದಿಲ್ಲ. ಯಾವುದೇ ಒಂದು ದಾಖಲೆಗೆ ಸಹಿ ಮಾಡುವಾಗ ಅದನ್ನು ಓದಿಸಿ ತಿಳಿದುಕೊಂಡು ಸಹಿ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನು ಹಾಗೂ ನನ್ನ ತಾಯಿ ಮಾಹಿತಿಯನ್ನು ಕೊಟ್ಟಿರುತ್ತೇವೆ. ನಾನು ಹೊಳೆ ಸಿರಗೇರಿ ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನನ್ನ ಮದುವೆ ಆಗುವವರೆಗೂ ಹೊಳೆಸಿರಗೇರಿ ಗ್ರಾಮದಲ್ಲಿ ಇದ್ದೆ. ನಾನು ಹಾಗೂ ನಮ್ಮ ತಂದೆ ತಾಯಿ ಹೊಳೆಸಿರಗೇರಿ ಗ್ರಾಮದಲ್ಲಿ ವಾಸ ಇದ್ದೇವು ಎನ್ನುವುದು ನಿಜ. ನನ್ನ ಶಾಲಾ ದಾಖಲಾತಿಗಳಲ್ಲಿ ಅನುಸೂಯಮ್ಮ ತಂದೆ ಕಡೂರು ಸಿದ್ದಪ್ಪ ಎಂದು ನಮೂದು ಇರುತ್ತದೆ. ಹೊಳೆಸಿರಗೇರಿ ಗ್ರಾಮದಲ್ಲಿ ಕಡೂರು ಎನ್ನುವ ಕುಟುಂಬ ಇರುತ್ತದೆ ಎನ್ನುವುದು ನಿಜ. ಸಿದ್ದಪ್ಪ ವಾರಸುದಾರರು ಇರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಕಡೂರು ಎಂಬ ಕುಟುಂಬದಲ್ಲಿ ಸಿದ್ದಪ್ಪ ಎನ್ನುವ ವ್ಯಕ್ತಿ ಇದ್ದರು ಎನ್ನುವುದು ನಿಜ. ನಮ್ಮ ತಾಯಿ ವಿವಾಹ ಯಾವಾಗ ಆಗಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ತಾಯಿಯ ವಿವಾಹ ಲಕ್ಕನಗೌಡ್ರ ಸಿದ್ದಪ್ಪ ಇವರೊಂದಿಗೆ ಆಗಿರುತ್ತದೆ. ನಮ್ಮ ತಾಯಿ ಲಕ್ಕನಗೌಡ್ರ ಸಿದ್ದನಗೌಡ್ರ ಇವರನ್ನು ವಿವಾಹ ಆಗಿರುವುದಕ್ಕೆ ದಾಖಲೆಯನ್ನು ಹಾಜರು ಪಡಿಸಿಲ್ಲ. ನಾನು ಲಕ್ಕನಗೌಡ್ರ ಸಿದ್ದನಗೌಡ ಇವರ ಮಗಳು ಎನ್ನುವುದುಕ್ಕೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಅಂತಹ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜಿಯ ಹೆಸರು ಲಕ್ಕನಗೌಡ್ರ ಶಿವಮ್ಮ. ತಾತಾನ ಹೆಸರು ಅಡಿವೆಪ್ಪಗೌಡ. ಸದರಿ ಅಡಿವೆಪ್ಪಗೌಡ ಹಾಗೂ ಶಿವಮ್ಮ ಇವರಿಗೆ ವೀರಹನುಮಂತಗೌಡ ಹಾಗೂ ಸಿದ್ದನಗೌಡ ಎಂಬ ಇಬ್ಬರು ಮಕ್ಕಳು. ಅಡಿವೆಪ್ಪಗೌಡ ಹಾಗೂ ಶಿವಮ್ಮ ಇವರಿಗೆ 3 ಮಕ್ಕಳು ಎನ್ನುವುದು ಗೊತ್ತಿರುವುದಿಲ್ಲ. ಅವರಿಗೆ ಹನುಮಮ್ಮ ಎನ್ನುವ ಹೆಣ್ಣು ಮಗಳು ಇದ್ದಳು, ಅವಳನ್ನು ಎಲ್ಲಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಹನುಮಮ್ಮ ಜೀವಂತ ಇರುತ್ತಾಳೋ ಅಲ್ಲ ಎಂದು ಗೊತ್ತಿರುವುದಿಲ್ಲ. ಅಡಿವೆಪ್ಪಗೌಡ ಹಾಗೂ ಶಿವಮ್ಮ ಇವರಿಗೆ 3 ಜನ ಮಕ್ಕಳು ಇದ್ದು, ನಾನು ಅವರ ಕುಟುಂಬದವಳು ಅಲ್ಲದ ಕಾರಣ ನನಗೆ ಅವರ ಕುಟುಂಬದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು, ನಮ್ಮ ತಾಯಿ ರಟ್ಟೀಹಳ್ಳಿ ತಾಲೂಕಾ ಕಡೂರು ಗ್ರಾಮದಲ್ಲಿ ವಾಸ ಇದ್ದು,ಹೋಗಿ ಬಂದು ಮಾಡುತ್ತೇವೆ. 2016 ರಲ್ಲಿ ಆಸ್ತಿ ಬರುತ್ತದೆ ಎಂದು ದಾವೆಯನ್ನು ಸಲ್ಲಿಸಿದ್ದೇವು. ಒಟ್ಟು 3 ಆಸ್ತಿಗಳ ಮೇಲೆ ದಾವೆಯನ್ನು ಸಲ್ಲಿಸಿದ್ದೇವು. ಸದರಿ ಕೇಸಿನಲ್ಲಿ ಹನುಮಮ್ಮ ಹಾಗೂ ಅವಳ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎನ್ನುವುದು

ಗೊತ್ತಿರುವುದಿಲ್ಲ . ನಾವು ಹಾಜರು ಪಡಿಸಿರುವ ದಾಖಲೆಗಳಲ್ಲಿ ನಮ್ಮ ತಾಯಿಯ ಹೆಸರು ಇರುತ್ತದೆ. ನಾವು ಹಾಜರು ಪಡಿಸಿರುವ ದಾಖಲೆಗಳಲ್ಲಿ ನಮ್ಮ ತಾಯಿ ಹೆಸರು ಇಲ್ಲ ಎಂದರೆ ಸರಿಯಲ್ಲ. ಮೇಲ್ಮನವಿದಾರನಿಗೆ ಮೂಲ ದಾವೆ ನಂಃ 100/2016 ರ ಸಮನ್ಸು ಜಾರಿಯಾದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೇವೆ. ಸದರಿ ದಾವೆಯಲ್ಲಿ ಸಮನ್ಸು ಈ ಮೇಲ್ಮನವಿದಾರನಿಗೆ ಜಾರಿ ಆಗಿರಲಿಲ್ಲ ಎಂದರೆ ಸರಿಯಲ್ಲ. ಸಮನ್ಸು ಜಾರಿಯಾಗದ ಕಾರಣ ನಾವು ಸಲ್ಲಿಸಿರುವ ಕೇಸಿನ ಬಗ್ಗೆ ಮೇಲ್ಮನವಿದಾರನಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. 2020 ಮಾರ್ಚ ತಿಂಗಳಲ್ಲಿ ಕೊರೋನಾ ಕಾಯಿಲೆಯಿಂದಾಗಿ ನ್ಯಾಯಾಲಯಗಳು ಬಂದ್ ಇದ್ದವು ಎನ್ನುವುದು ನಿಜ. 2020 ಮಾರ್ಚ್ ನಿಂದ ಅಕ್ಟೋಬರ 2020 ರವರೆಗೆ ನ್ಯಾಯಾಲಯಗಳ ಕಾರ್ಯ ವೈಖರಿಗಳು ಸರಳವಾಗಿ ನಡೆಯುತ್ತಿರಲಿಲ್ಲ ಎನ್ನುವುದು ನಿಜ. 2020 ಅಕ್ಟೋಬರ ತಿಂಗಳಿನಲ್ಲಿ ನ್ಯಾಯಾಲಯದ ಆಯುಕ್ತರು ಮೇಲ್ಮನವಿದಾರನಿಗೆ ನೋಟಿಸನ್ನು ನೀಡಿದಾಗ ನಾವು ಸಲ್ಲಿಸಿದ ದಾವೆಯ ಬಗ್ಗೆ ಮೇಲ್ಮನವಿದಾರನಿಗೆ ಗೊತ್ತಾಯಿತು ಎಂದರೆ ಸಾಕ್ಷಿ ಅದರ ಮೊದಲು ನೋಟಿಸು ಹೋಗಿತ್ತು ಎಂದು ಹೇಳುತ್ತಾರೆ. ಸದರಿ ದಾವೆಯ ವಿಷಯ ಗೊತ್ತಾದ ತಕ್ಷಣ ಮೇಲ್ಮನವಿದಾರನು ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. 2004 ರಲ್ಲಿ ನಮ್ಮ ತಂದೆ ಕಡೂರಿನಲ್ಲಿ ಮೃತಪಟ್ಟಿರುತ್ತಾನೆ. ನಮ್ಮ ತಂದೆ ಮೃತಪಡುವ 1 ವಾರ ಮೊದಲಿನಿಂದಲೂ ನಮ್ಮ ಮನೆಯಲ್ಲಿ ಇದ್ದ. ಸಿದ್ದನಗೌಡಲಕ್ಕನಗೌಡ್ರ ಇವರು ವೀರ ಹನುಮಂತಗೌಡ ಇವರ ಮಕ್ಕಳ ಜೊತೆ ಕಡೂರು ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಸದರಿ ಸಿದ್ದನಗೌಡಲಕ್ಕನಗೌಡ್ರ ಇವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಸಿದ್ದನಗೌಡಲಕ್ಕನಗೌಡ್ರ ಇವರಿಗೆ ಮಕ್ಕಳು ಆಗದ ಕಾರಣ 1962 ರಲ್ಲಿ 5 ನೇ ಎದುರುದಾರರನ್ನು ದತ್ತಕ ತೆಗೆದುಕೊಂಡಿದ್ದ ಎನ್ನುವುದು ಗೊತ್ತಿರುವುದಿಲ್ಲ. ಮೇಲ್ಮನವಿದಾರನು ಏನು ದಾಖಲೆಯನ್ನು ಹಾಜರು ಪಡಿಸಿರುತ್ತಾನೆ ಎಂದು ತಿಳಿದುಕೊಂಡಿರುತ್ತೇನೆ. ದತ್ತಕ ಪತ್ರ ವನ್ನು ಮೇಲ್ಮನವಿದಾರ ಹಾಜರು ಪಡಿಸಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ತಾಯಿ 2003 ರಲ್ಲಿ ವೀರಹನುಮಂತಗೌಡರ ಮಗ ಚಂದ್ರುಶೇಖರ ಇವರು ವಿರುದ್ಧ ಹಾವೇರಿಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದಳು ಎನ್ನುವುದು ನಿಜ. ಸದರಿ ಮೇಲ್ಮನವಿಯಲ್ಲಿ ಆಸ್ತಿ ಬೇಕು ಎಂದು ಪರಿಹಾರ ಕೇಳಿದ್ದೇವು. 1962 ರಲ್ಲಿ ದತ್ತಕದ ತೆಗೆದುಕೊಂಡಿದ್ದರ ಮೇಲೆ ಅವರ ಎಲ್ಲಾ ಆಸ್ತಿಗಳು ವೀರಹನುಮಂತಗೌಡ ಹಾಗೂ ಚಂದ್ರುಶೇಖರಗೌಡ ಇವರ ಹೆಸರಿಗೆ ಖಾತೆಯಾಗಿದ್ದವು ಎನ್ನುವುದು ಗೊತ್ತಿರುವುದಿಲ್ಲ. ಮುಟೇಷನನ್ನು ರದ್ದುಪಡಿಸುವ ಸಲುವಾಗಿ ಮೇಲ್ಮನವಿಯನ್ನು ಸಲ್ಲಿಸಿದ್ದೇವು ಎನ್ನುವುದು ನಿಜ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ವಜಾ ಆಗಿರುತ್ತದ್ದರು ಸಹ ಆಗಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ವಜಾ ಆಗಿರುವುದನ್ನು ಪ್ರಶ್ನಿಸಿ ಇಂದಿನವರೆಗೂ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಮಗೆ ನೋಟಿಸು ಬಂದಿಲ್ಲ ಎಂದು ಹೇಳುತ್ತಾರೆ. ನಾವು

ಆರ್. ಎ. ನಂಃ 35/2020
ಆರ್.ಡಬ್ಲ್ಯೂಃ 1

ಸಿದ್ದನಗೌಡಲಕ್ಕನಗೌಡ್ರ ಇವರ ಹೆಂಡತಿ ಮಕ್ಕಳು ಆಗಿದ್ದರೆ ಮೇಲ್ಮನವಿಯನ್ನು ಸಲ್ಲಿಸುತ್ತಿದ್ದೇವು ಎಂದರೆ ಸಾಕ್ಷಿ ನಮಗೆ ನೋಟಿಸು ಬಂದಿಲ್ಲ ಎಂದು ಹೇಳುತ್ತಾರೆ. ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ 2003 ರಲ್ಲಿ ಆದೇಶ ಆಗಿರುತ್ತದೆ ಎಂದರೆ ಸಾಕ್ಷಿ ನೋಟಿಸು ಬಂದಿಲ್ಲ ಎಂದು ಹೇಳುತ್ತಾರೆ. 2003 ರಿಂದ 2016 ರವರೆಗೆ ಯಾವುದೇ ನ್ಯಾಯಾಲಯದಲ್ಲಿ ಮೇಲ್ಮನವಿ ಅಥವಾ ನಮ್ಮ ಹಕ್ಕನ್ನು ಚಲಾಯಿಸಿಲ್ಲ ಎಂದರೆ ಸರಿಯಲ್ಲ. 14 ವರ್ಷಗಳ ನಂತರ ನಾವು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿ ನಮಗೆ ನೋಟಿಸು ಬಂದಿಲ್ಲ ಎಂದು ಹೇಳುತ್ತಾರೆ. ಮೇಲ್ಮನವಿಯನ್ನು ಸಲ್ಲಿಸಲು ಕಾಲವಿಳಂಬವಾಗಿಲ್ಲ, ಅವರ ಗಮನಕ್ಕೆ ಬಂದ ತಕ್ಷಣ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಮೇಲ್ಮನವಿದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 12-12-2022

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು